**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1717/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಚಂದ್ರೇಗೌಡ | ಫ್ರಾಸಾ-2 |
| ತಂದೆಯ ಹೆಸರು | : ಶಿವಣ್ಣಗೌಡ | ಚಾಸಾ-8 |
| ವಯಸ್ಸು | : 39 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಾಲಕ ಕಂ ನಿರ್ವಾಹಕ | ದಿನಾಂಕಃ13.05.2025 |
| ವಾಸಸ್ಥಳ | : KSRTC, ಮೂಡಿಗೆರೆ | |

**<u>:ಮುಖ್ಯ ವಿಚಾರಣೆ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ಮತ್ತು 9 ರವರು ನಮ್ಮ ಇಲಾಖೆಯಲ್ಲಿ ಚಾಲಕರಾಗಿ ಕೆಲಸ ಮಾಡುತ್ತಾರೆ.

ಸಾಕ್ಷಿಯು ನಿಪಿ-3 ಮತ್ತು 6 ರ ಮಹಜರ್ ಗಳಲ್ಲಿ ತಮ್ಮ ಸಹಗಳನ್ನು ಗುರುತಿಸಿ, ನಿಪಿ-4, 5 ಮತ್ತು 7 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಗಳನ್ನು ನಿಪಿ-3(ಬಿ) ಮತ್ತು ನಿಪಿ-6(ಬಿ) ಎಂದು ಗುರುತಿಲಾಯಿತು.

ದಿ.05.04.2024 ರಂದು ನಾನು ಮತ್ತು ಚಾಸಾ-9 ರವರು ಮೂಡಿಗೆರೆ ಬಸ್ ಸ್ಟ್ಯಾಂಡ್ ನಲ್ಲಿ ಇರುವಾಗ ಮೂಡಿಗೆರೆ ಪೋಲಿಸರು ನಮ್ಮನ್ನು ಮುತ್ತಿಗೆಪುರದ ಹರೀಶ್ ಪಿ.ಯು ಕಾಲೇಜು ಎದುರು ಕರೆದುಕೊಂಡು ಹೋಗಿ ಅಲ್ಲಿ ಬೆ.11.45 ರಿಂದ 12.45 ರವರೆಗೆ ಚಾಸಾ-1 ರವರು ಅಪಘಾತ ಸ್ಥಳವನ್ನು ತೋರಿಸಿದ ಮೇರೆಗೆ ಮಹಜರ್ ಬರೆದು, ಪೋಟೋಗಳನ್ನು ತೆಗೆಸಿರುತ್ತಾರೆ. ನಂತರ ನಮ್ಮನ್ನು ಪೋಲಿಸ್ ಠಾಣೆಯ ಬಳಿ ಕರೆದುಕೊಂಡು ಬಂದು ಅಲ್ಲಿ ಇದ್ದ KA-18-F-0654 KSRTC ಬಸ್ ಮತ್ತು KA-18-D-7272 ಕ್ಯಾಂಟರ್ ವಾಹನವನ್ನು ವಶಕ್ಕೆ ಪಡೆದು ಮ.1.15 ರಿಂದ 2.00 ಗಂಟೆಯವರೆಗೂ ಮಹಜರ್ ಬರೆದು ಪೋಟೋಗಳನ್ನು ತೆಗೆಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:</u>**

ದಿ.05.04.2024 ರಂದು ನಾನು ಮೂಡಿಗೆರೆ-ಬೇಲೂರು ಮಾರ್ಗದಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಕರ್ತವ್ಯ ಅವಧಿ ಬೆ.7.00 ರಿಂದ ಸ.7.00 ಗಂಟೆ. ದಿ.05.04.2024 ರಂದು ನಾನು ಕರ್ತವ್ಯಕ್ಕೆ ಹಾಜರಾಗಿದ್ದೆ. ನಮ್ಮನ್ನು ಕರೆದಿದ್ದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಆ ದಿನ ನಮಗೆ ನೋಟೀಸು ಕೊಟ್ಟಿದ್ದರು. ನಮಗೆ ನೊಟೀಸು ಕೊಡುವಾಗ ಬೆ.10.30 ರ ಸಮಯವಾಗಿತ್ತು. ನಾವು ಪೋಲಿಸರೊಂದಿಗೆ ಅವರ ಜೀಪ್ ನಲ್ಲಿ ಸ್ಥಳಕ್ಕೆ ಹೋದೆವು. ಜೀಪ್ ನಲ್ಲಿ ಚಾಸಾ-1, ಸರ್ಕಲ್ ಇನ್ಸಪೆಕ್ಟರ್ ಮತ್ತು ಇಬ್ಬರು ಪೋಲಿಸರು ಇದ್ದರು. ಯಾವ ಕಾರಕ್ಕೆ ಹಾಗೂ ಯಾರಿಂದ ಅಪಘಾತವಾಯಿತು ಎಂದು ನನಗೆ ಮಾಹಿತಿ ಇಲ್ಲ. ಆ ದಿನ ಪೋಲಿಸ್ ಠಾಣೆಗೆ ಹೋದಾಗ ಮ.1.00 ಗಂಟೆಯಾಗಿತ್ತು. ನಾನು ಹೇಳಿದ ವಾಹನಗಳು ಪೋಲಿಸ್ ಠಾಣೆಯ ಬಳಿ ಇದ್ದವು. ಅಮಾನತ್ತು ಮಹಜರ್ ಬರೆದ ಸ್ಥಳದ ಪೂರ್ವಕ್ಕೆ ಪೋಲಿಸ್ ಕ್ವಾಟ್ರಸ್, ಪಶ್ಚಿಮಕ್ಕೆ ನೀರಿನ ಟ್ಯಾಂಕ್, ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇತ್ತು.

ಮಹಜರ್ ಗಳನ್ನು ನಾನು ಓದಿ ನೋಡಿಲ್ಲ. ಪೋಲಿಸರು ಮತ್ತು ಚಾಸಾ-1 ರವರ ಕೋರಿಕೆಯ ಮೇರೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಚಾಸಾ-1 ಮತ್ತು ಪೋಲಿಸರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.